ಶ್ರೀ ಎಸ್.ಎಂ. ಕೃಷ್ಣ: ಅದಕ್ಕೇ ಕಾಯುತ್ತೇನೆಂದು ನಾನು ಕೂಡ ಹೇಳಲಿಲ್ಲ. ಅದಕ್ಕೆ ನಾವು ಕಾಯುವುದಕ್ಕೆ ಆಗುವುದಿಲ್ಲ. ಆ ವಿಚಾರಕ್ಕೆ ಯಾರೂ ಕಾಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ಬೇರೆ ಹಣ ಬಿಡುಗಡೆ ಮಾಡಿ ಈ ಕೆಲಸವನ್ನು ಮುಂದುವರಿಸಬೇಕು ಎಂದು ನಾನು ಹೇಳಿದ್ದು.

ಶ್ರೀ ಎ. ನಾಗರಾಜ್: ಮಾನ್ಯ ಸಭಾಧ್ಯಕ್ಷರೆ, ಈ ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎಂಟು ದಿವಸಗಳ ಕೆಳಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಒಂದು ವಿಶೇಷ ಸಭೆಯಲ್ಲಿ, ಕುಡಿಯುವ ನೀರಿನ ಸರಬರಾಜಿಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ಮಾಡಿ ಪ್ರತಿ ಕ್ಷೇತ್ರಕ್ಕೂ 25ರಿಂದ 30 ಲಕ್ಷ ಕೊಟ್ಟಿದ್ದಾರೆ. ಕೋಲಾರ ಕ್ಷೇತ್ರಕ್ಕೆ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಇಮ್ಮಿಡಿಯೇಟ್ ಆಗಿ ಡೈವರ್ಟ್ ಮಾಡಿ ಹೂಳು ಎತ್ತಿಸುವಂತಹ ಕಾರ್ಯವನ್ನು ಮಾಡಬಹುದು.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಹಳ್ಳಿಗಳಲ್ಲಿ ಏನು ಮಾಡುವುದು?

ಶ್ರೀ ಎ. ನಾಗರಾಜ್: ಎಲ್ಲದಕ್ಕೂ ಹೊಂದಾಣಿಕೆ ಮಾಡಿಕೊಳ್ಳಬಹುದು. ಕೋಲಾರ ಕ್ಷೇತ್ರಕ್ಕೆ 35 ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಅರ್ಬನ್‌ಗೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಸುಮಾರು 45 ಲಕ್ಷ ರೂಪಾಯಿಗಳನ್ನು ಕೋಲಾರ ಕ್ಷೇತ್ರಕ್ಕೆ ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ): ಇನ್ನು ಉಳಿದ ಹಳ್ಳಿಗೆ ಏನು ಮಾಡುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ: ನಾನು ಕೋಲಾರ ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿಲ್ಲ. ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಇವೆಲ್ಲ ಒಣ ಪ್ರದೇಶಗಳು ಎಂದು ಸರ್ಕಾರ ಕಂಡುಕೊಂಡಿದೆ. ಆದ್ದರಿಂದ ನಾವು ಕೊಡತಕ್ಕಂತಹ ಹಣ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೆ ಆಗಬೇಕು. ಅದರಲ್ಲಿ ಒಂದು ಭಾಗ ಕೋಲಾರಕ್ಕೂ ಸಿಗುತ್ತದೆ ಎನ್ನತಕ್ಕಂತದ್ದನ್ನು ನಾನು ಹೇಳುತ್ತಿದ್ದೇನೆ.

6. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) ಮಾನ್ಯ ಛೇರ್ಮನ್‌ರವರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಉಭಯ ಸದನಗಳನ್ನು ಉದ್ದೇಶಿಸಿ ಈ ಸದನದಲ್ಲಿ ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಧನ್ಯವಾದಗಳನ್ನರ್ಪಿಸಿರುವಂತೆ ನಾನೂ ಸಹ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಸುವಂಥ ಸಂದರ್ಭದಲ್ಲಿ ಹಿರಿಯ ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಒಂದು ಮಾತನಾಡಿದ್ದರು. ಏನೆಂದರೆ, ರಾಜ್ಯಪಾಲರ ಭಾಷಣ, ರಾಜ್ಯ ಸರ್ಕಾರ ಮುಂದಿನ ಅವಧಿಯಲ್ಲಿ ಏನೇನು ಮಾಡುತ್ತದೆ ಎಂಬುದರ ದಿಕ್ಸೂಚಿ ಎಂದರು. ಈ ದಿಕ್ಸೂಚಿಯನ್ನು ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ ನಂತರ ಆಯವ್ಯಯ ಪತ್ರದ ಮಂಡನೆಯಾಗುತ್ತದೆ. ಅದರಲ್ಲಿ ಮುಂದಿನ ಒಂದು ವರ್ಷದಲ್ಲಿ ರಾಜ್ಯ ಸರ್ಕಾರದವರು ಏನನ್ನು ಮಾಡುತ್ತಾರೆಂಬುದನ್ನು ಈಗಾಗಲೇ ಹೇಳಿದ್ದಾರೆ. ಆದುದರಿಂದ, ಬಜೆಟ್ ಮಂಡನೆಯಾದ ನಂತರ ಈ ಕುರಿತು ಚರ್ಚಿಸುವುದು ಎಷ್ಟು ಪ್ರಸ್ತುತ ಎನ್ನುವುದನ್ನು ನಾವು ಆಲೋಚಿಸಬೇಕಾಗುತ್ತದೆ.

ನಿನ್ನೆ ದಿವಸ ಮಾನ್ಯ ಸದಸ್ಯರಾದ ಸಿಂಧ್ಯಾರವರು ಮಾತನಾಡುತ್ತಾ ಹೇಳಿದರು. ಈಗ ಹೇಗೂ ಆಗಿಹೋಯಿತು, ಆದರೆ, ಮುಂದಿನ ದಿನಗಳಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾದ ಬಳಿಕ ಬಜೆಟ್ ಮಂಡನೆಯಾಗುವಾಗ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗಬಹುದು ಎಂಬ ಅಂಶಗಳನ್ನೆಲ್ಲಾ ತೆಗೆದುಕೊಂಡು ಬಜೆಟ್ ಮಂಡಿಸಬೇಕೆನ್ನುವುದು ನನ್ನ ಅನಿಸಿಕೆ. ಆದುದರಿಂದ, ರಾಜ್ಯಪಾಲರ ಭಾಷಣದ ನಂತರ ಬಜೆಟ್ ಮಂಡನೆಯಾದಾಗ ಇದರ ಮೇಲೆ ಚರ್ಚೆಯಾಗುವುದು ಎಷ್ಟು ಪ್ರಸ್ತುತರಾಗುತ್ತದೆ? ಆದುದರಿಂದ, ಮುಂದಿನ ದಿವಸಗಳಲ್ಲಾದರೂ ಇದಕ್ಕೆ ಅವಕಾಶ ಕೊಡಬಾರದೆಂದು ಸರ್ಕಾರಕ್ಕೆ ಹಾಗೂ ಮಾನ್ಯ ಸಭಾ ನಾಯಕರಿಗೆ ಕೇಳಿಕೊಳ್ಳುತ್ತೇನೆ. ಏಕೆಂದರೆ, ಬಜೆಟ್ ಮಂಡನೆಯಾದಾಗ ಮುಂದಿನ ಒಂದು ವರ್ಷದ ಬಜೆಟ್‌ನಲ್ಲಿ ತಿಳಿಸಿದಂತೆ ಕೆಲಸಕಾರ್ಯಗಳನ್ನು ಮಾಡುವಂತದ್ದು ರಾಜ್ಯ ಸರ್ಕಾರದ ಕರ್ತವ್ಯವಾಗಿರುತ್ತದಾದ್ದರಿಂದ ಆದರಲ್ಲಿ ತೋರಿಸಿರುತ್ತಾರೆ. ಈಗ ಬೆಂಗಳೂರಿನಲ್ಲಿ ಅನೇಕ ತರಹದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಉದಾಹರಣೆಗೆ, ರಸ್ತೆಯನ್ನು ಡಾಂಬರೀಕರಣಗೊಳಿಸುವಂಥಾದ್ದು, ರಸ್ತೆಯನ್ನು ಅಗಲಗೊಳಿಸುವಂಥಾದ್ದು, ಫ್ಲೈ ಓವರ್ ಮಾಡುವಂಥಾದ್ದು, ಇದರ ಜೊತೆಗೆ ಇನ್ನು ಮುಂತಾದ ಕಾರ್ಯಕ್ರಮಗಳನ್ನು ಹಿಂದಿನ ಸರ್ಕಾರ ಹಾಕಿಕೊಂಡಿತ್ತು. ಆದಕಾರಣ, ಈ ಆರು ತಿಂಗಳುಗಳಲ್ಲಿ ಹಿಂದೆ ಅಧಿಕಾರದಲ್ಲಿದ್ದಂಥ ಜನತಾದಳ ಸರ್ಕಾರ ಏನಿತ್ತು, ಅದು ಈ ಕೆಲಸಗಳನ್ನೆಲ್ಲಾ ಮಾಡಿರುವಂತಾದ್ದಾಗಿದೆ. ಅದೇ ರೀತಿ ಮುಂದಿನ ಅವಧಿಯಲ್ಲಿ ಏನೇನು ಮಾಡುತ್ತೇವೆಯೋ ಅದು ಈ ಸರ್ಕಾರ ಹಮ್ಮಿಕೊಂಡಿರುವಂಥ ಕೆಲಸ-ಕಾರ್ಯಗಳಾಗಿರುತ್ತವೆ. ಸದಸ್ಯರಾದ ವಿ. ಸೋಮಣ್ಣನವರು ಸದನದಲ್ಲಿದ್ದಾರೆ. ಅವರೇ ಹಿಂದಿನ ಸರ್ಕಾರದಲ್ಲಿದ್ದಾಗ ಬೆಂಗಳೂರು ನಗರಾಭಿವೃದ್ಧಿಯ ಖಾತೆಯನ್ನು ವಹಿಸಿಕೊಂಡಿದ್ದರು. ಅವೆಲ್ಲವೂ ಹಿಂದಿನ ಸರ್ಕಾರ ಹಮ್ಮಿಕೊಂಡಿದ್ದಂಥ ಕೆಲಸಗಳಲ್ಲವೆಂದು ಅವರು ಹೇಳುವುದಾದರೆ 'ಅದು ನಾನು ಮಾಡಿದ ಕೆಲಸವಲ್ಲ' ಎಂತಲೂ ಅವರು ಹೇಳಬೇಕಾಗುತ್ತದೆ. ಮತ್ತು ಅವರು 'ಅದು ನಾನು ಮಾಡಿದ ಕೆಲಸ' ಎಂದು ಹೇಳಬೇಕಾದರೆ 'ಹಿಂದಿನ ಸರ್ಕಾರ ಮಾಡಿದ ಕೆಲಸ' ವೆಂದು ಹೇಳಬೇಕಾಗುತ್ತದೆ. ಆದುದರಿಂದ, ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕಳೆದ ಸಲ ಬೆಂಗಳೂರಿನ ಅಭಿವೃದ್ಧಿಗಾಗಿ ಸುಮಾರು 125 ಕೋಟಿ ರೂಪಾಯಿಗಳಷ್ಟು ಹಣವನ್ನು ಬಾಂಡ್‌ಗಳ ಮೂಲಕ ರೈಸ್ ಮಾಡಿ ಕೆಲಸ-ಕಾರ್ಯಗಳನ್ನು ಮಾಡಿಸುವಂತಾದ್ದು, ಕೇವಲ ಕರ್ನಾಟಕ ರಾಜ್ಯ ಅಥವಾ, ಈ ಸರ್ಕಾರವೆಂದಾಗಲೀ ಅಥವಾ ಹಿಂದಿನ ಸರ್ಕಾರವೆಂದಾಗಲೀ ಹೇಳುವಂತಾದ್ದು ಒಂದು ರೀತಿಯ ಪ್ರಾಕ್ಟೀಸ್ ಆಗಿದೆ. ನಾನೊಮ್ಮೆ ಓದುವಾಗ ಒಂದು ವಿಷಯವನ್ನು ನನ್ನ ಗಮನದಲ್ಲಿಟ್ಟುಕೊಂಡೆ. ಅದು ಬಹಳ ಪ್ರಸ್ತುತವಾದುದಾಗಿದೆ.

> "Affairs of the State are operated so that one generation pays the debts of the last generation by issuing bonds payable by the next generation."

ಹಿಂದಿನ ಜನರೇಷನ್ ಮಾಡಿರುವಂಥ ಸಾಲಕ್ಕೆ ಇವೊತ್ತಿನ ಜನರೇಷನ್ ಬಾಂಡ್ ಕೊಟ್ಟು ಮುಂದಿನ ಜನರೇಷನ್ ಅದನ್ನು ಪಾವತಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲಾ ರಾಜ್ಯಗಳಲ್ಲೂ ಈ ರೀತಿ ಮಾಡುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಎಲ್ಲಿಯವರೆಗೆ ಇದೇ

ರೀತಿ ಮುಂದುವರೆಯುತ್ತದೆ ಮತ್ತು ಎಲ್ಲಿಗೆ ಹೋಗಿ ನಿಲ್ಲುತ್ತದೆಂದು ನಾವು ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಾವು ಸ್ವಲ್ಪ ಆಲೋಚಿಸಿದಾಗ, ನಾವು ಏನನ್ನು ಮಾಡುತ್ತಿದ್ದೇವೆ, ಎಲ್ಲಾದಕ್ಕೂ ಸಾಲದ ಹೊರೆಯನ್ನು ಮುಂದಿನ ಜನರೇಷನ್ ಮೇಲೆ ಇಟ್ಟು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದನ್ನು ಯಾವ ರೀತಿ ಹೋಗಲಾಡಿಸಲು ಸಾಧ್ಯವಿದೆ ಎಂಬುದರ ಕುರಿತು ಆಲೋಚಿಸುವಂಥಾದ್ದು ಅವಶ್ಯಕವಾಗಿದೆ. ಇನ್ನು ಸಾಮಾಜಿಕ ನ್ಯಾಯದ ಬಗ್ಗೆ ನಿನ್ನೆ ಚರ್ಚೆಯಾಯಿತು. ಅನೇಕ ದಿವಸಗಳಿಂದಲೂ ಈ ಸಾಮಾಜಿಕ ನ್ಯಾಯದ ಕುರಿತು ಈ ಸದನದಲ್ಲಿ ಹಾಗೂ ಸದನದ ಹೊರಗಡೆ ಚರ್ಚೆ ಮಾಡುತ್ತಿದ್ದೇವೆ. ಸಾಮಾಜಿಕ ನ್ಯಾಯದ ಬಗ್ಗೆ ಸರ್ಕಾರ ಕಾನೂನು ಮಾಡುತ್ತದೆ, ಎಷ್ಟರಮಟ್ಟಿಗೆ ಸರ್ಕಾರಗಳು ಈ ಕಾನೂನನ್ನು ಜಾರಿಗೆ ತರಲು ಸಾಧ್ಯವಾಗಿದೆ ಎಂಬುದರ ಕುರಿತೂ ಆಲೋಚಿಸಬೇಕಾಗುತ್ತದೆ. ಕೇವಲ ಕಾನೂನು ಮಾಡಿದ ಕೂಡಲೇ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸಾಮಾಜಿಕ ನ್ಯಾಯವನ್ನು ಕೊಟ್ಟಂತಾಗುವುದಿಲ್ಲ. ಕಾನೂನನ್ನು ಜಾರಿಗೆ ತರಬೇಕಾಗುತ್ತದೆ. ಆ ಮೂಲಕ ಅದರ ಲಾಭವನ್ನು ಅವರಿಗೆ ತಲುಪಿಸಬೇಕಾಗುತ್ತದೆ. ಯಾವ ಸಮಾಜಕ್ಕೋಸ್ಕರ ನಾವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆಯೋ, ಆ ಕಾರ್ಯಕ್ರಮ ಅವರುಗಳಿಗೆ ಮುಟ್ಟಿಸುವುದಕ್ಕೆ ಸಾಧ್ಯವಾಗಿದೆಯೇ ಎಂಬ ಬಗ್ಗೆ ನಾವು ಆಲೋಚಿಸುವುದಲ್ಲದೆ ಸರ್ಕಾರವೂ ಆಲೋಚನೆ ಮಾಡಬೇಕಾಗುತ್ತದೆ. ನಾವು ಪ್ರತಿ ಬಾರಿ ಮಾತನಾಡುವಾಗ, ಯಾವುದೋ ಒಂದು ಪ್ರಶ್ನೆಗೆ ಸಂಬಂಧಿಸಿದಂತೆ ಚರ್ಚಿಸಿದಾಗ, ಸರ್ಕಾರದ ಪರವಾಗಿ ಮಾತನಾಡುವಾಗ 'ನೀವೇನು ಮಾಡಿದಿರಿ?' ಎಂದು ಅತ್ತ ಕಡೆ ಕುಳಿತಿರುವ ಶಾಸಕರುಗಳು ಕೇಳುತ್ತಾರೆ. ನಮ್ಮ ಪಕ್ಷದ ನಾಯಕರುಗಳು ಮಾಡಿದ ತಪ್ಪಿನಿಂದಾಗಿ ನಾವುಗಳಿಲ್ಲರೂ ಇತ್ತ ಕಡೆ ಕುಳಿತಿದ್ದು ನೀವೆಲ್ಲರೂ ಅತ್ತ ಕಡೆ ಹೋಗಿ ಕುಳಿತಿದ್ದೀರಿ. ಅದನ್ನು ಸರಿಪಡಿಸಬೇಕೆಂದು ನಾವು ನಿಮ್ಮ ಹತ್ತಿರ ಹೇಳಿದ್ದೇವೆಯೇ ವಿನಾ ''ನೀವೇನು ಮಾಡಿದ್ದೀರಿ? ಎಂಬ ಪ್ರಶ್ನೆಯನ್ನು ಕೇಳುವುದಕ್ಕಲ್ಲ, ನಿಮ್ಮನ್ನು ಅಲ್ಲಿ ಕೂರಿಸಿರುವುದು ಎಂಬುದನ್ನು ಅವರು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಈ ಸಭೆಯಲ್ಲಿ ತಾವೇ ನೋಡಿರುವಂತೆ, ನಾವುಗಳು ವಿರೋಧ ಪಕ್ಷದಲ್ಲಿದ್ದುಕೊಂಡು ಅನೇಕ ಪ್ರಶ್ನೆಗಳನ್ನು ಕೇಳಿದರೂ ಪ್ರಶ್ನೆಗಳಿಗೆ ಸರಿಯಾದ ಉತ್ತರವೇ ಬರುತ್ತಿಲ್ಲ. ರಾಜ್ಯಪಾಲರ ಭಾಷಣದ ಮೇಲಾಗಲೀ, ಆಯವ್ಯಯ ಪತ್ರದ ಮೇಲಾಗಲೀ ನಮ್ಮ ಸಮಾಧಾನಕ್ಕೆ ಮಾತ್ರ ನಾವು ಈ ಸದನದಲ್ಲಿ ಪ್ರಶ್ನೆಗಳನ್ನು ಕೇಳುವಂತಾದ್ದಾಗಬಾರದು. ನಾವು ಕೇಳಿದಂಥ ಪ್ರಶ್ನೆ ಅಥವಾ ಆಡಿದಂಥ ಮಾತುಗಳಿಗೆ ಸರಿಯಾದ ಉತ್ತರ ಬಂದಾಗ ಮಾತ್ರ ನಮಗೆ ಸಮಾಧಾನವಾಗುತ್ತದೆ. ಏಕೆಂದರೆ, ನಾವು ಚರ್ಚೆ ಮಾಡುವುದು ಕೇವಲ ನಮ್ಮ ಮಾಹಿತಿಗಾಗಿಯಲ್ಲ. ಇದರಿಂದ ಸರ್ಕಾರಕ್ಕೂ ಏನಾದರೂ ಲಾಭವಾಗಬಹುದೆಂಬ ದೃಷ್ಟಿಯಿಟ್ಟುಕೊಂಡು ವಿರೋಧ ಪಕ್ಷದವರಾದ ನಾವು ಕೇಳುತ್ತೇವೆ. ಮಾನ್ಯ ಸಭಾ ನಾಯಕರೇ ಹಿಂದೊಮ್ಮೆ ಮಾತನಾಡುತ್ತಾ 'ನಿಂದಕರಿರಬೇಕು' ಎಂದು ಹೇಳಿದ್ದಾರೆ. ಆದುದರಿಂದ, ಉಳಿದ ಎಲ್ಲಾ ಮಂತ್ರಿಗಳೂ ಸಹ ಇದರ ಬಗ್ಗೆ ಆಲೋಚಿಸಬೇಕಾಗುತ್ತದೆ. ನಾವು ನಿಂದಿಸುವಂತಾದ್ದು ವೈಯಕ್ತಿಕ ದ್ವೇಷದಿಂದಲ್ಲ, ಅವರುಗಳು ಸರಿಯಾದ ಮಾರ್ಗದಲ್ಲಿ ಹೋಗಲೆಂಬ ದೃಷ್ಟಿಯಿಂದಲೇ ನಾವು ನಿಂದಿಸುವುದು ಎಂಬುದನ್ನು ಅರಿತು, ಆಲೋಚಿಸಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಸಭಾ ನಾಯಕರು ಈಗ ಸದನದಲ್ಲಿರುವುದರಿಂದ ಅವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಏನೆಂದರೆ, ಮಂತ್ರಿಗಳು ಜಿಲ್ಲಾ ಕೇಂದ್ರಗಳಿಗೆ ಹೋದಾಗ ಪೊಲೀಸ್ ಎಸ್ಕಾರ್ಟ್

ಅನ್ನು ತೆಗೆದುಕೊಂಡು ಹೋಗುತ್ತಾರೆ. ಕೆಲವೊಮ್ಮೆ ಒಂದೊಂದು ಜಿಲ್ಲೆಗೆ ನಾಲ್ಕೈದು ಮಂತ್ರಿಗಳು ಬಂದಾಗಲಂತೂ ಉದ್ಭವಿಸುವ ನಿಜವಾದ ಸಮಸ್ಯೆಯನ್ನು ನಾನು ತಮ್ಮ ಮುಂದೆ ಮಂಡಿಸಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಮಂತ್ರಿಗೂ ಒಂದೊಂದು ಎಸ್ಕಾರ್ಟ್ ಕೊಟ್ಟರೂ ಸಾಧಾರಣವಾಗಿ ಆ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳ ಸಬ್ ಇನ್ಸ್‌ಪೆಕ್ಟರುಗಳು ಮತ್ತು ಜೀಪುಗಳೆಲ್ಲರೂ ಅವರು ವಾಪಸ್ಸು ಹೋಗುವವರೆಗೆ ಅವರ ಡಿಸ್‌ಪೋಸಲ್‌ನಲ್ಲಿರುತ್ತವೆ. ಪ್ರಾಯಶಃ ಪ್ರತಿ ಮಂತ್ರಿಗೂ ಒಬ್ಬರು ಗನ್‌ಮ್ಯಾನ್ ಎಂದು ಕೊಟ್ಟಿರುತ್ತಾರೆ. ಈ ರಾಜ್ಯದಲ್ಲಿ ಎಸ್ಕಾರ್ಟ್‌ನ ಅವಶ್ಯಕತೆ ಇರುವುದಿಲ್ಲ. ಎಲ್ಲಾ ಪೊಲೀಸ್ ಠಾಣೆಗಳ ಪೊಲೀಸ್ ಅಧಿಕಾರಿಗಳನ್ನು, ಪೊಲೀಸ್ ಜೀಪುಗಳನ್ನು ಡ್ರಾ ಮಾಡಿ ಮಂತ್ರಿಗಳ ರಕ್ಷಣೆಗೆ ಕಳುಹಿಸುವಂತಾದ್ದು ಅಷ್ಟು ಸೂಕ್ತವಲ್ಲ. ಏಕೆಂದರೆ, ಎಸ್ಕಾರ್ಟ್ ಸೌಲಭ್ಯವನ್ನು ಉಪಯೋಗಿಸಿಕೊಂಡು ಏನಾದರೂ ಗಲಭೆಗಳಾದಾಗ ತೊಂದರೆಯಾಗಬಹುದಾದ್ದರಿಂದ ಇದರ ಬಗ್ಗೆ ಗೃಹ ಸಚಿವರು ಸ್ವಲ್ಪ ಗಮನಹರಿಸಬೇಕು. ಸಂಬಂಧಪಟ್ಟ ಮಂತ್ರಿಗಳು ಸಹ ತಮಗೆ ಎಲ್ಲಿ ಎಸ್ಕಾರ್ಟ್‌ನ ಅವಶ್ಯಕತೆಯಿದೆಯೆಂಬ ಬಗ್ಗೆ ಆಲೋಚಿಸಬೇಕು. ಎಸ್ಕಾರ್ಟ್ ಸೌಲಭ್ಯವನ್ನು ಒದಗಿಸಿಕೊಡುವ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇತರ ಬೇರೆ ರಾಜ್ಯಗಳಲ್ಲಿ ನಿರ್ಮಾಣವಾಗಿರುವ ಪರಿಸ್ಥಿತಿಯಂತೆ ನಮ್ಮ ರಾಜ್ಯದಲ್ಲಿ ಆಗಬಾರದು. ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂಬ ಭಾವನೆ ಕೂಡ ಜನರಲ್ಲಿ ಬರಬಾರದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ನಮ್ಮ ರಾಷ್ಟ್ರದ ರಾಜಕೀಯ ಪರಿಸ್ಥಿತಿ ಕುರಿತು ಹೇಳಬಯಸುತ್ತೇನೆ. ಇವೊತ್ತಿನ ದಿವಸ ಪಶ್ಚಿಮ ಬಂಗಾಳದಲ್ಲಿರುವ ರಾಜಕೀಯ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡಿರುವ ಬಗ್ಗೆ ಮೊನ್ನೆ ದಿವಸ ಒಂದು ಪತ್ರಿಕೆಯೊಂದನ್ನು ಓದುತ್ತಿದ್ದಾಗ 'ಗ್ಯಾಂಡ್ ಅಲಯೆನ್ಸ್ ಎಂಬ ವ್ಯಂಗ್ಯ ಚಿತ್ರ ನೋಡಿದೆ. ಆ ವ್ಯಂಗ್ಯ ಚಿತ್ರದಲ್ಲಿ ರೈಲಿನ ಚಿತ್ರವಿದ್ದು, ಇಂಜಿನ್ನಿನ ಮೊದಲ ಬೋಗಿ ತೃಣಮೂಲ ಕಾಂಗ್ರೆಸ್ ಆಗಿದ್ದರೆ, ಇದಕ್ಕೆ ಹೊಂದಿಕೊಂಡಂತೆ ಭಾರತೀಯ ಜನತಾ ಪಕ್ಷದ ಬೋಗಿ ಮತ್ತು ಇದಕ್ಕೆ ಹೊಂದಿಕೊಂಡಂತೆ ಕಾಂಗ್ರೆಸ್ ಬೋಗಿ ಕ್ರಮವಾಗಿದ್ದವು. ಬಹುಶಃ ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಲಿಕ್ಕಿಲ್ಲ ಅಥವಾ ಅಂತಹ ಪರಿಸ್ಥಿತಿ ನಿರ್ಮಾಣವಾಗುವುದಾದರೆ ಮೊನ್ನೆ ದಿವಸ ಎಲ್.ಕೆ. ಅಡ್ವಾನಿಯವರು ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದರು. ಆದುದರಿಂದ, ಅಂತಹ ಪರಿಸ್ಥಿತಿ ನಿರ್ಮಾಣವಾದಾಗ ಅದು ಯಾವ ರೀತಿಯಲ್ಲಾಗಬಹುದೆಂದು ನಾವು ಆಲೋಚಿಸಬೇಕಾಗುತ್ತದೆ. ಏಕೆಂದರೆ, ಒಂದು ಕಡೆ ಬಿ.ಜೆ.ಪಿ ಇನ್ನೊಂದೆಡೆ ಕಾಂಗ್ರೆಸ್ ಮಧ್ಯದಲ್ಲಿ ತೃಣಮೂಲ ಕಾಂಗ್ರೆಸ್ ಹಾಗೂ ಜನತಾ ದಳ (ಯು) ಸಮೇತ ರಾಷ್ಟ್ರಮಟ್ಟದಲ್ಲಿ ನಾವು ಕೇಂದ್ರ ಸರ್ಕಾರದೊಂದಿಗಿದ್ದೇವೆಂದಾಗ, ಎಲ್ಲಾ ಪಕ್ಷಗಳೂ ಹೊಂದಾಣಿಕೆಯಿಂದಿದ್ದು ಒಂದೇ ಪಕ್ಷ ವಿರೋಧಿಸುವಂಥ ಪರಿಸ್ಥಿತಿಲ್ಲಿಯೂ ಸಹ ನಿರ್ಮಾಣವಾಗುತ್ತದೆ. ಇದಕ್ಕೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ಈಗ ನಮ್ಮಲ್ಲಿ ಇರುವಂಥದ್ದು Our differences are political, but our agreements are in Principal. ಅದು ಈಗ ಉಲ್ಟಾ ಆಗಿ our agreements are in Principle, but differences in Politics, ಇದು ಆಗಬಾರದು.

ಆ ಒಂದು ಹೊಂದಾಣಿಕೆ ನಿರ್ಮಾಣ ಆಗಬಾರದು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಸಿಂಧ್ಯಾರವರು ಹಿಂದೆ ಮಾನ್ಯ ಸಭಾನಾಯಕರ ಹತ್ತಿರ ಒಂದು ಬೇಡಿಕೆಯನ್ನು ಇಟ್ಟಿದ್ದರು.

'ಫಾರಿಖ್ ಕಮಿಟಿ'ಯ ವರದಿಯನ್ನು ಈ ಸದನದ ಎಲ್ಲಾ ಸದಸ್ಯರಿಗೆ ಕೊಟ್ಟು, ಅದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆಂಬುದನ್ನು ಮಾನ್ಯ ಸಿಂಧ್ಯಾರವರು ಹೇಳಿದ್ದರು. ಈವರೆಗೆ ಆ ಫಾರಿಖ್ ಕಮಿಟಿಯ ವರದಿ ಸದನದ ಯಾವ ಸದಸ್ಯರಿಗೂ ಇನ್ನೂ ಸಿಕ್ಕಿದಹಾಗೆ ಇಲ್ಲ. ಅದರ ಬಗ್ಗೆ ಚರ್ಚೆಯನ್ನು ಮಾಡುವ ಅವಕಾಶ, ಸದನದ ಸದಸ್ಯರಿಗೆ ಸಿಕ್ಕಿದಹಾಗೆ ಕಾಣಲಿಲ್ಲ. ಈ ಫಾರಿಖ್‌ಕಮಿಟಿಯ ವರದಿಯನ್ನು ತಾವು ಕೇಳಿದ್ದೀರೆಂದು ಕಾಣುತ್ತದೆ. ಅದರ ಬಗ್ಗೆ ಚರ್ಚೆಯನ್ನು ಇಟ್ಟುಕೊಂಡರೆ ಬಹಳ ಒಳ್ಳೆಯದು. ಇನ್ನೊಂದು ವಿಷಯವನ್ನು ಮಾನ್ಯ ಸಭಾನಾಯಕರ ಹತ್ತಿರ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಎನ್ರಾನ್‌ರವರು ಕರ್ನಾಟಕದಲ್ಲಿ ಒಂದು ಎಲ್.ಎನ್.ಜಿ.ಯನ್ನು ಡಾಬೋಲ್‌ನಿಂದ ತರುವುದಕ್ಕೆ ಒಂದು ಸರ್ವೆಯನ್ನು ಮಾಡಿ ಕರ್ನಾಟಕದ, ಪ್ರಾಯೋಜಕತ್ವ ಎಂಬ ಶಬ್ದವನ್ನು ಅದರಲ್ಲಿ ಹಾಕಿದಹಾಗೆ ಇತ್ತು. ಕರ್ನಾಟಕ ಸರ್ಕಾರ ಅದಕ್ಕೆ ಪ್ರಾಯೋಜಕತ್ವ ಕೊಟ್ಟು, ಅವರು ರಿಪೋರ್ಟ್‌ನ್ನು ಮಾಡಿದ್ದಾರೆಯೇ? ಅಥವಾ ಟೆಂಡರನ್ನು ಕರೆದಿದ್ದಾರೆಯೇ? ಏಕೆಂದರೆ ಈ ಹಿಂದೆ ನಮ್ಮ ಸರ್ಕಾರ ಇದ್ದಾಗ, ಕೆಲವು ಫಿನಲೆಕ್ಸ್‌ನವರು, ಬೇರೆ ಬೇರೆಯವರು ಬಂದು ಕರ್ನಾಟಕದಲ್ಲಿ ಎಲ್.ಎನ್.ಜಿ. ಗ್ಯಾಸ್ ಟರ್ಮಿನಲ್ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದರು. ಆದರೆ, ಇವತ್ತಿನದಿವಸ ಡಾಬೋಲ್‌ನಿಂದ ನೇರವಾಗಿ ಪೈಪ್‌ಲೈನ್ ಮುಖಾಂತರ ಇಲ್ಲಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಬಗ್ಗೆ ಅವರು ಒಂದು ವರದಿಯನ್ನು ಕೊಟ್ಟಿದ್ದರು. ಅದಿನ್ನೂ ಫೈನಲೈಸ್ ಆಗಿದೆ ಎಂದು ನಾನು ಹೇಳುವುದಿಲ್ಲ. ಅದರ ಬಗ್ಗೆ ತಾವು ಬೆಳಕನ್ನು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿಯ ಮೀನುಗಾರರ ಸಮಸ್ಯೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ಕೊಟ್ಟಂಥ ಸೇಲ್ಸ್‌ಟ್ಯಾಕ್ಸ್ ವಿನಾಯಿತಿಯನ್ನು ತೆಗೆದು, ಸರಳೀಕರಣಗೊಳಿಸುತ್ತೇವೆಂದು ತಾವು ಹೇಳಿದ್ದೀರಿ. ಅದು ಯಾವರೀತಿ ಕೊಡುತ್ತೇವೆಂದು ಈ ಸಭೆಗೆ ಅಥವಾ ಮೀನುಗಾರರಿಗೆ ಹೇಳಲಿಲ್ಲ. ಅವರು ಪ್ರತಿನಿತ್ಯ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟು, ತಾವು ಮುಷ್ಕರವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ತಾವು ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮೀನುಗಾರರಿಗೆ ಕೊಡಬೇಕು. ಮತ್ತೆ ಮೂರ್ತೆದಾರರ ಸಮಸ್ಯೆ ಬಗ್ಗೆ, ಅವರಿಗೆ ಲೀಟರ್ ಫೀಯನ್ನು ಮನ್ನಾ ಮಾಡುತ್ತೇವೆಂದು ಹಿಂದೆ ನಮ್ಮ ಸರ್ಕಾರ ಇದ್ದಾಗ ಹೇಳಿದ್ದೆವು. ಪ್ರಾಯಶಃ ಈವರೆಗೆ ಅದು ಕಾರ್ಯಗತವಾಗಲಿಲ್ಲ. ಅದು ಹೆಚ್ಚಾಗಲಿಕ್ಕಿಲ್ಲ. ಕೇವಲ 30 ರಿಂದ 40 ಲಕ್ಷ ರೂಪಾಯಿಗಳು ಮಾತ್ರ ಬಾಕಿ ಇದೆ. ಅದನ್ನು ಅವರಿಗೆ ಮನ್ನಾ ಮಾಡಿಸಿಕೊಡಬೇಕೆಂದು ಕೇಳುತ್ತೇನೆ.

ಇನ್ನು ರೈತರ ಸಮಸ್ಯೆಗಳು. ಇವತ್ತು ರೈತರ ಕ್ರಾಪ್ ಹಾಳಾದಾಗ, ಅವರು ಆತ್ಮಹತ್ಯೆ ಮಾಡಿಕೊಂಡರೆ ಒಂದು ಲಕ್ಷ ರೂಪಾಯಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿರುವ ಮಾನ್ಯ ಕೃಷಿ ಸಚಿವರ ಹೇಳಿಕೆಯನ್ನು ನೋಡಿದ್ದೇನೆ. ಸತ್ತವರಿಗೆ ನೀವು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ, ಆದರೆ, ಬೆಳೆಯನ್ನು ಕಳೆದುಕೊಂಡು, ಜೀವಸಹಿತ ಇದ್ದೂ ಸತ್ತಂತಹ ಪರಿಸ್ಥಿತಿಯಲ್ಲಿ ಇರುವ ರೈತರ ಪರಿಸ್ಥಿತಿಯ ಬಗ್ಗೆ ನೀವು ಸ್ವಲ್ಪ ಆಲೋಚನೆ ಮಾಡಬೇಕು. ನಾನು ಹಿಂದೆ ಕೂಡ ಹೇಳಿದ್ದೇನೆ. ಅವರಿಗೆ ಕೊಡುವಂಥ ಪರಿಹಾರ ಕೇವಲ ಒಂದು ಹೆಕ್ಟೇರ್‌ಗೆ 500 ರೂಪಾಯಿಗಳು, ಅದನ್ನು ಜಾಸ್ತಿ ಮಾಡದೆ ಇದ್ದರೆ ಪ್ರಾಯಶಃ ಅವರು ಬದುಕಿದ್ದೂ ಸತ್ತಂಥ ಪರಿಸ್ಥಿತಿಯಲ್ಲಿರುವಂಥ ದಿನಗಳು ಇವತ್ತು ಇದೆ. ಅದಕ್ಕೋಸ್ಕರ ಅದನ್ನು ಜಾಸ್ತಿ ಮಾಡಬೇಕು. ತಾವು ಕ್ರಾಪ್ ಇನ್‌ಷೂರೆನ್ಸ್

ಮಾಡುತ್ತೇವೆಂದು ಹೇಳಿದ್ದೀರಿ. ಅದು ಎಲ್ಲಾ ಭಾಗಕ್ಕೆ, ಎಲ್ಲಾ ಕೃಷಿಕರಿಗೆ ಅನ್ವಯವಾಗುವಂತೆ ಅದರ ಸಹಾಯವನ್ನು ಮಾಡಿದರೆ ಬಹಳ ಉತ್ತಮವಾಗುತ್ತದೆ. ಏಕೆಂದರೆ, ಒಂದು ವರ್ಷ ಅವರ ಕೃಷಿ ಹಾಳಾದಾಗ, ನಮ್ಮಲ್ಲಿ ಏನಾಗುತ್ತದೆಂದರೆ, ಅತಿ ಮಳೆ ಇದ್ದುದರಿಂದ ಮಳೆಗಾಲದಲ್ಲಿ ನೀರು ನಿಂತು ಬೆಳೆ ಕೊಳೆತುಹೋಗುತ್ತದೆ. ಪುನಃ ಅವರಿಗೆ ಅಲ್ಲಿ ಬಿತ್ತನೆಯನ್ನು ಮಾಡಲಿಕ್ಕಾಗುವುದಿಲ್ಲ. ಮತ್ತೆ ಆ ವರ್ಷದ ಸಂಪೂರ್ಣ ಕೃಷಿ ಹಾಳಾಗುತ್ತದೆ. ಅದಕ್ಕೆ ತಾವು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಹೇಳುತ್ತೇನೆ.

ಇನ್ನು ವಾಟರ್‌ಷೆಡ್ ಡೆವಲಪ್‌ಮೆಂಟ್ ಪ್ರೋಗ್ರಾಂ ಬಗ್ಗೆ ನಾನು ಹಿಂದಿನ ಸಭೆಯಲ್ಲಿ ಹೇಳಿದ್ದೆ. ಮೊನ್ನೆ ಲೇಖಾನುದಾನ ತೆಗೆದುಕೊಳ್ಳುವ ಮುಂಚೆ ಮಾತನಾಡುವಾಗಲೂ ಈ ವಾಟರ್‌ಷೆಡ್‌ಡೆವಲಪ್‌ಮೆಂಟ್ ಪ್ರೋಗ್ರಾಂ ಬಗ್ಗೆ ಹೇಳಿದ್ದೆ. ಒಂದು ವಾರಾಹಿ ಯೋಜನೆ ಬಗ್ಗೆ, ಇನ್ನೊಂದು ಎಲ್ಲಾ ನದಿಗಳಿಂದ ನೀರು ಸಮುದ್ರಕ್ಕೆ ಹೋಗುವುದನ್ನು ನಿಲ್ಲಿಸಲಿಕ್ಕೆ ವಾಟರ್ ಷೆಡ್ ಡೆವಲಪ್‌ಮೆಂಟ್ ಪ್ರೋಗ್ರಾಂ ಮಾಡುವಂತಾದ್ದು. ಇದರ ಬಗ್ಗೆ ತಾವು ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ, ಖಂಡಿತ ಅದರಿಂದ ಅನುಕೂಲ ಆಗಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಸಭಾನಾಯಕರು 10ನೇ ಷೆಡ್ಯೂಲ್ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಲಿ ಎಂದು ಹೇಳಿದ್ದನ್ನು, ಮಾನ್ಯ ಸಿಂಧ್ಯಾರವರು ಪುನಃ ಮಾತನಾಡಿ, ಸಭಾನಾಯಕರ ಗಮನಕ್ಕೆ ಮತ್ತು ಅಧ್ಯಕ್ಷರಿಗೆ ಒಂದು ಮಾತನ್ನು ಹೇಳಿದರು. 11 ಜನ ಪಕ್ಷೇತರರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರಿಂದ, ಅವರ ಸದಸ್ಯತ್ವ ಹೋಗಬೇಕಾಗುತ್ತದೆ. ಅದರ ಬಗ್ಗೆ ಒಂದು ಅರ್ಜಿಯನ್ನು ಮಾನ್ಯ ಸಭಾನಾಯಕರಿಗೆ ಕೊಡುತ್ತೇವೆಂದು ಹೇಳಿದ್ದರು. ಆ ಸಂದರ್ಭದಲ್ಲಿ ಇಬ್ಬರು ಸದಸ್ಯರು ಎದ್ದು ಮಾತನಾಡಿದರು. ಮಾನ್ಯ ಬನ್ನಿಕೋಡ್‌ರವರು ಮತ್ತು ಮಾನ್ಯ ವಡ್ಡಾಳ್ ರಾಜಣ್ಣನವರು, ನಾವು ಕಾಂಗ್ರೆಸ್ ಸದಸ್ಯರಾಗಿಲ್ಲ, ಅಸೋಸಿಯೇಟ್ ಮೆಂಬರ್ ಆಗಿದ್ದೇವೆ ಎಂದು ಹೇಳಿದರು. ನಾನು 'ಪಾರ್ಲಿಮೆಂಟರಿ ಪ್ರೊಸೀಜರ್ ಬಗ್ಗೆ ಶ್ರೀ ಸುಭಾಷ್ ಕಶ್ಯಪ್‌ರವರ ಪುಸ್ತಕದಲ್ಲಿ ಇರುವುದನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇವೆ.

> "There is no provision for association Members. There is no provision in the rules to treat the Members belonging to Opposition group as associate Members of the ruling party. however, they may be allotted seats adjacent to the block of the seats allotted to the ruling party.
>
> " Suggestion made to this effect by M.P.A. in June 1997 was not pursued further. Members, who desire to function as associate members of parties/groups could be treated as unattached members as there is no provision for associate members."

ಇಂಡಿಪೆಂಡೆಂಟ್ ಮೆಂಬರ್ಸ್ ಬಗ್ಗೆ ಸಹ ಅದೇ ಪರಿಸ್ಥಿತಿ ಇದೆ. ಏಕೆಂದರೆ, ಇಲ್ಲಿ ಅಸೋಸಿಯೇಟೆಡ್ ಮೆಂಬರ್ಸ್ ಆಗಲಿಕ್ಕಾಗುವುದಿಲ್ಲ. They can sit as unattached Members.

"The practice of showing independent and lone Members of Legislature Party as unattached was done away with during th Loka Sabha consequent to coming into force of the Constitution Act,."

Unattached ಮೆಂಬರ್ಸ್ ಎಂಬುದನ್ನು ತೆಗೆದುಹಾಕಿದ್ದಾರೆ. ಈಗ ಅಸೋಸಿಯೇಟ್ ಮೆಂಬರ್ಸ್ ಎಂದು ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಕೇವಲ unattached ಅಥವಾ ಇಂಡಿಪೆಂಡೆಂಟಾಗಿ ಕುಳಿತುಕೊಳ್ಳುವುದಕ್ಕೆ ಬಿಟ್ಟರೆ, ಅವರಿಗೆ ಅಸೋಸಿಯೇಟೆಡ್ ಮೆಂಬರ್ಸ್ ಎಂದು ಹೇಳಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಅಸೋಸಿಯೇಟೆಡ್ ಮೆಂಬರ್ಸ್ ಆಗಲಿಕ್ಕೂ ಅವಕಾಶ ಇಲ್ಲ. ಅದರ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ಅವಕಾಶ ಕೊಡಬೇಕು.

ಇನ್ನು ಸಿ.ಓ.ಡಿ ಮತ್ತು ಇಂಟೆಲಿಜೆನ್ಸಿ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರಾಯಶಃ ಮಾನ್ಯ ಸಭಾನಾಯಕರು ಮನಿಸಬೇಕಾಗುತ್ತದೆ. ಈ ಸಿ.ಓ.ಡಿಯಲ್ಲಿ ಪೊಲೀಸ್ ಇಲಾಖೆಯಲ್ಲಿರುವವರನ್ನು ಪನಿಷ್‌ಮೆಂಟ್ ಆಗಿ ಸಿಓಡಿಗೆ ಹಾಕುವಂತಾದ್ದು, ಪನಿಷ್‌ಮೆಂಟ್ ಆಗಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ಹಾಕುವಂಥಾದ್ದು ಇದೆ. ಅವರು ಅಲ್ಲಿ ಹೋದರೂ ಕೆಲಸವನ್ನು ಮಾಡಲಿಕ್ಕೆ ಹೆಚ್ಚು ಆಸಕ್ತಿ ಇರುವುದಿಲ್ಲ. ಕೆಲವರಿಗೆ ಆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಆಸಕ್ತಿ ಇರಬಹುದು. ಅಂತಹವರು ಹೋದರೆ ತೊಂದರೆಯಾಗಲಿಕ್ಕಿಲ್ಲ. ಪನಿಷ್‌ಮೆಂಟ್ ಎಂದು ಅವರನ್ನು ಹಾಕಿದಾಗ, ಅವರು ಅಲ್ಲಿ ಹೋದಾಗಲೂ ಕೆಲಸ ಮಾಡಲಿಕ್ಕೆ ಆಸಕ್ತಿ ಇರುವುದಿಲ್ಲ. ಅದಕ್ಕಿಂತ, ನೀವು ಈ ಇಂಟೆಲಿಜೆನ್ಸ್‌ಗಾಗಿ ಪ್ರತ್ಯೇಕ ವಿಂಗ್ ಪ್ರಾರಂಭ ಮಾಡಿ ಮತ್ತು ಸಿಓಡಿಗಾಗಿ ಪ್ರತ್ಯೇಕ ವಿಂಗ್ ಪ್ರಾರಂಭ ಮಾಡಿ. ಆಗ ಹೆಚ್ಚಿನ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಇಲಾಖೆ ಸರಿಯಾಗಿ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಸಭಾನಾಯಕರಿಗೆ ಈ ಇಂಟೆಲಿಜೆನ್ಸ್ ಮತ್ತು ಸಿ.ಓ.ಡಿ. ಬಗ್ಗೆ ನಾನೇನು ಹೇಳುತ್ತೇನೆಂದರೆ, ಪನಿಷ್‌ಮೆಂಟಾಗಿ ಸಿಓಡಿಗೆ ವರ್ಗಾವಣೆ ಮಾಡುವಂತಾದ್ದು ಮತ್ತು ಪನಿಷ್‌ಮೆಂಟಾಗಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ವರ್ಗಾವಣೆ ಮಾಡುವಂತಾದ್ದನ್ನು ನಿಲ್ಲಿಸಿ, ಪ್ರತ್ಯೇಕ ವಿಂಗ್‌ನ್ನು ಪ್ರಾರಂಭ ಮಾಡಬಹುದು. ಪ್ರತ್ಯೇಕ ವಿಂಗ್ ಪ್ರಾರಂಭ ಮಾಡಿ, ಅದಕ್ಕೆ ನೇಮಕಾತಿಯಾದಾಗ ಮಾತ್ರ, ಅಲ್ಲಿ ಪರಿಣಾಮಕಾರಿಯಾಗಿ ಕೆಲಸ ಆಗುತ್ತದೆಂದು ನನ್ನ ಅನಿಸಿಕೆ. ಕೆಲವರಿಗೆ ಅದರಲ್ಲಿ ಕೆಲಸ ಮಾಡಲಿಕ್ಕೆ ಇಂಟ್ರಿಸ್ಟ್ ಇರುತ್ತದೆ. ಪನಿಷ್‌ಮೆಂಟ್ ಎಂದು ಹಾಕಿದರೆ ಖಂಡಿತವಾಗಿಯೂ ಕೆಲಸವನ್ನು ಮಾಡಲಿಕ್ಕೆ ಆಸಕ್ತಿ ಇರುವುದಿಲ್ಲವೆಂದು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಮತ್ತೆ ಒಂದು ತಾಲ್ಲೂಕಿಗೆ ಕಾಮಗಾರಿ ಮಾಡಲಿಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದರಲ್ಲಿ ಏನಾಗಿದೆ ಎಂದರೆ, ಒಂದೊಂದು ತಾಲ್ಲೂಕಿಗೆ ಕೆಲವು ಕಡೆಯಲ್ಲಿ ಒಂದೇ ಕ್ಷೇತ್ರ ಇದ್ದರೆ, ಕೆಲವು ಕಡೆಯಲ್ಲಿ 3-4 ಕ್ಷೇತ್ರಗಳು ಇವೆ. ಅದನ್ನು ಹಂಚುವಾಗ ಒಂದೊಂದು ಕ್ಷೇತ್ರಕ್ಕೆ 20-25 ಲಕ್ಷ ಬರುತ್ತದೆ. ನಮ್ಮ ಉಡುಪಿಯಲ್ಲಿ ಮೂರುವರೆ ಕ್ಷೇತ್ರ ಇದೆ. ಕುಂದಾಪುರದ ಒಂದು ಭಾಗ, ಉಡುಪಿಯ ಮೂರು ಕ್ಷೇತ್ರಗಳು. ಆದರೆ, ಕಾರ್ಕಳಕ್ಕೆ ಒಂದೇ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ಹೋಗುತ್ತದೆ. ಇದರ ಬಗ್ಗೆ ಸ್ಪೆಷಲ್

ಗ್ರಾಂಟ್ ಅಥವಾ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದು ಕೋಟಿ ಎಂದು ಮಾಡಿದಾಗ ಹೆಚ್ಚಿನ ಕಾಮಗಾರಿಗಳನ್ನು ಈ ಎಲ್ಲಾ ಕ್ಷೇತ್ರಗಳಲ್ಲಿ ಮಾಡಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ಮೊನ್ನೆ ವಾರಾಹಿ ಯೋಜನೆ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವನ್ನು ನಾನೇ ತರಿಸಿಕೊಳ್ಳಬೇಕಾಯಿತು. ನನಗೆ ಮಂತ್ರಿಗಳಿಂದ ಬರಲಿಲ್ಲ ಅಥವಾ ಲೆಜಿಸ್ಲೇಚರ್‌ನಿಂದ ಬರಲಿಲ್ಲ. ನಾನು ಗಲಾಟೆ ಮಾಡಿ ಅಧಿಕಾರಿಗಳ ಮುಖೇನ ತರಿಸಿಕೊಳ್ಳ ಬೇಕಾಯಿತು. ನನ್ನ 14 ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಮಾತ್ರ ಉತ್ತರವನ್ನು ಕೊಟ್ಟಿದ್ದಾರೆ.

ಉಳಿದ ಪ್ರಶ್ನೆಗಳಿಗೆ ನನಗೆ ಉತ್ತರವೇ ಬರಲಿಲ್ಲ. ನಾನೇ ಅಲ್ಲಿಗೆ ಹೋಗಿ ಅಧಿಕಾರಿಗಳ ಮುಖೇನ ಉತ್ತರವನ್ನು ತರಿಸಿಕೊಳ್ಳಬೇಕಾಯಿತು. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಬಾರದು. ನಾವು ಕೇಳಿದ ಪ್ರಶ್ನೆಗೆ ಉತ್ತರ ಬರುವುದಿಲ್ಲ ಮತ್ತು ನಾವು ಕೇಳಿದ್ದಕ್ಕೆ ಗಮನವನ್ನೂ ಸಹಾ ಹರಿಸುವುದಿಲ್ಲ. ಕೇವಲ ನಮ್ಮ ಸಮಾಧಾನಕ್ಕೆ ಮಾತ್ರ ನಾವು ಮಾತನಾಡುವಂತಾಗಿದೆ. ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್‌ಮನ್: ನಾನು ಈಗ ಸದನವನ್ನು ಮಂದೂಡುತ್ತಿದ್ದೇನೆ. ಪುನಃ ಸದನವು ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವನ್ನು ಮಧ್ಯಾಹ್ನ ಒಂದು ಗಂಟೆ 2 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

(ಮತ್ತೆ ಸಭೆಯು ಮಧ್ಯಾಹ್ನ 3.00 ಗಂಟೆಗೆ ಪ್ರಾರಂಭಗೊಂಡಿತು) ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

7. ಸದನದಲ್ಲಿ ಸಚಿವರುಗಳ ಗೈರು ಹಾಜರಿ:

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರನ್ನಾದರೂ ಮುಂದಿನ ಸಾಲಿನಲ್ಲಿ ಬಂದು ಕುಳಿತುಕೊಳ್ಳಲು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: (ವಿರೋಧ ಪಕ್ಷದ ನಾಯಕರು) ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಪರಿಸ್ಥಿತಿ ಹೇಗಿದೆ ನೋಡಿ, ಇಲ್ಲಿ ಮಂತ್ರಿಗಳು ಇಲ್ಲ, ಸದಸ್ಯರುಗಳು ಇಲ್ಲ, ನಾವು ಏನು ಮಾಡುವುದು ಹೇಳಿ? ಹಿಂದಿನ ಸರ್ಕಾರವಿದ್ದಾಗ ಕೊನೆಯ ಆರು ತಿಂಗಳಲ್ಲಿ ಈ ರೀತಿಯ ಪರಿಸ್ಥಿತಿ ಇತ್ತು. ಆದರೆ ಈ ಸರ್ಕಾರದಲ್ಲಿ ಮೊದಲನೆಯ ವರ್ಷವೇ ಈ ಪರಿಸ್ಥಿತಿ ಇದೆ ಎಂದರೆ, ಇದು ಏನೆಂದು ನಮಗೆ ತಿಳಿಯುತ್ತಾ ಇಲ್ಲ.